## ಆರೋಗ್ಯದ ಗುಟ್ಟು

ಅಂದು ರಮೇಶನ ಮನೆಯಲ್ಲಿ ಮಡದಿಯಿಂದ ಪ್ರವಚನ ಸಾಗಿತ್ತು. 'ರೀ ನೀವು ದಿನಾ ಹೀಗೇ ಕುಡಿದು ಬಂದ್ರೆ ನಿಮ್ಮ ಆರೋಗ್ಯ ಏನಾಗಬೇಡ? ಎಷ್ಟು ಹೇಳಿದ್ರೂ ಸಂಜೆಯಷ್ಟೊತ್ತಿಗೆ ಎಲ್ಲಾ ಮರೆತು ಹೋಗುತ್ತೆ ಅಲ್ವಾ? ಏನಾದ್ರೂ ಹೆಚ್ಚೂ ಕಡಿಮೆ ಆದ್ರೆ ಯಾರ್‍ರಿ ಬರ್ತಾರೆ ನಮ್ಮ ಸಹಾಯಕ್ಕೆ?' ಅಂತೆಲ್ಲಾ ಅವಳು ಭಾಷಣ ಮಾಡುವಾಗ ಆತನ ಸ್ನೇಹಿತ ನಾಣಿ ಬಂದ. ಆತ ಬಹಳವೇ ಸಪ್ಪೂರವಾಗಿ ಹೋಗಿದ್ದ. 'ಏನೊ ನಾಣಿ? ಹೀಗಾಗಿದ್ದೀಯ? ಯಾಕೆ? ಹುಷಾರಿಲ್ವೇನೊ?' ಎಂದು ಈತ ವಿಚಾರಿಸಹತ್ತಿದ. ನಾಣಿ, 'ಹು ಕಣೊ, ಯಾಕೊ ಪದೇ ಪದೇ ಆರೋಗ್ಯ ಹದಗೆಡ್ತಾ ಇದೆ... ' ಎಂದು ಅವಲತ್ತುಕೊಂಡ. ರಮೇಶ, 'ನೀನು ಗುಂಡು ಹಾಕೋನೂ ಅಲ್ಲ. ಪಾಪ, ಟೀ–ಕಾಫಿ ಕುಡಿಯೋಕೇ ಹೆದರುತ್ತೀಯ...' ಎಂದಾಗ ನಾಣಿ, 'ಹೌದು ರಮೇಶ, ಅದಕ್ಕೇ ಆರೋಗ್ಯ ಹೀಗೆ ಅಂತ ಕಾಣುತ್ತೆ' ಎಂದಾಗ ರಮೇಶ ಖುಷಿಯಾಗಿ ಹೆಂಡತಿ ಕಡೆ ತಿರುಗಿ, 'ನೋಡೆ, ಕುಡೀದೇ ಇದ್ರೂ ಹೇಗಾಗಿದ್ದಾನೆ ನೋಡು' ಎಂದ.



**ಶಂಕರೇಗೌಡ ತುಂಬಕೆರೆ**

---

## ಮಲಗಿದ್ದೆ

ಗಿರೀಶ ಯಾವಾಗ ನೋಡಿದ್ರೂ ಕ್ಲಾಸಿನಲ್ಲಿ ನಿದ್ದೆ ಮಾಡ್ತಾ ಇರ್ತಾನೆ ಅಂತ ಮೇಷ್ಟ್ರಿಗೆ ಸಿಟ್ಟಿತ್ತು. ಆವತ್ತು ಇತಿಹಾಸದ ತರಗತಿ ಮುಗಿದ ಮೇಲೆ ಗಿರೀಶನನ್ನು ಎಬ್ಬಿಸಿ, 'ಬಾಬರ ಭಾರತದ ಮೇಲೆ ಯಾವಾಗ ದಾಳಿ ಮಾಡಿದ?' ಎಂದು ಕೇಳಿದರು. ಯಥಾಪ್ರಕಾರ ಗಿರೀಶ, 'ಗೊತ್ತಿಲ್ಲ ಸಾರ್' ಎಂದ. 'ಯಾವಾಗ ನೋಡಿದ್ರೂ ನಿದ್ದೆ ಮಾಡ್ತಾ ಇದ್ರೆ ಹ್ಯಾಗೆ ಗೊತ್ತಾಗುತ್ತೆ, ನಾಳೆ ನಿಮ್ಮ ತಂದೆನ ಕರ್ಕೊಂಡು ಬಾ' ಎಂದು ಬೈದು ಕಳಿಸಿದರು. ಮಾರನೇ ದಿನ ಅವನ ತಂದೆ ಶಾಲೆಗೆ ಬಂದರು. ಮೇಷ್ಟ್ರು, 'ನೋಡಿ, ಬಾಬರ ಭಾರತದ ಮೇಲೆ ಯಾವಾಗ ದಾಳಿ ಮಾಡಿದ ಅಂತ ಕೇಳಿದರೂ ಹೇಳೋಕೆ ಬರಲಿಲ್ಲ ನಿಮ್ಮ ಮಗನಿಗೆ... ಯಾವಾಗಲೂ ನಿದ್ದೆ ಮಾಡ್ತಾ ಇರ್ತಾನೆ' ಎಂದರು. ಗಿರೀಶನ ತಂದೆ, 'ಅಯ್ಯೊ ನನಗೂ ಅವನು ಯಾವಾಗ ದಾಳಿ ಮಾಡಿದ ಅನ್ನೋದೇ ಗೊತ್ತಾಗಲಿಲ್ಲ ಸಾರ್, ನಾನೂ ನಿನ್ನೆ ಸ್ವಲ್ಪ ಬೇಗ ಮಲಗಿ ಬಿಟ್ಟೆ' ಎಂದಾಗ ಮೇಷ್ಟ್ರು ಸುಸ್ತು.



ಕಲೆ: ಗಣೇಶ ಆಚಾರ್ಯ

**ಸುವರ್ಣಾ ಮಠ**